# ಆಜ್ಜನ ಪಾಠ

■ ಅರವಿಂದ ಜಿ. ಜೋಷಿ
ಕಲೆ: ಸಂತೋಷ್ ಸಸಿಹಿತ್ಲು

ಶಾಂತಜ್ಜ ತಮ್ಮ ಮನೆಯ ಹಿತ್ತಲಲ್ಲಿ ಇದ್ದ ಒಂದಿಷ್ಟು ಜಾಗದಲ್ಲಿ ದೇವರ ಪೂಜೆಗೆಂದು ನಾಲ್ಕೈದು ತರಹದ ಹೂವಿನ ಗಿಡ ಗಳಲ್ಲದೇ, ಅಡುಗೆಗೆ ಅವಶ್ಯಕವಾಗಿ ಬೇಕಾಗುವ ಕೊತ್ತಂಬರಿ ಸೊಪ್ಪು, ಮೆಂತ್ಯ ಸೊಪ್ಪು ಹಾಗೂ ಹಸಿ ಮೆಣಸಿನಕಾಯಿ ಗಿಡಗಳನ್ನು ಮುತುವರ್ಜಿ ವಹಿಸಿ ಬೆಳೆಸುತ್ತಿದ್ದರು.

ಇದನ್ನು ಹತ್ತಿರದಿಂದ ಕಂಡ ಶಾಂತಜ್ಜನ ಮೊಮ್ಮಕ್ಕಳಾದ ಕಿರಣ್ ಮತ್ತು ಬಾಲು ತಮ್ಮ ತಾತನಿಗೆ 'ತಾತಾ... ಹೇಗೂ ನಾಳೆಯಿಂದ ನಮಗೆ ಎರಡು ತಿಂಗಳು ಬೇಸಿಗೆ ರಜಾ ಆರಂಭವಾಗುತ್ತದೆ. ನಮಗೂ ಯಾವುದಾದರೂ ತರಕಾರಿ ಬೆಳೆಯುವುದನ್ನು ಹೇಳಿ ಕೊಡಿ ಪ್ಲೀಸ್' ಎಂದು ಹೇಳಿದವು. ಮೊಮ್ಮಕ್ಕಳ ಈ ಆಸಕ್ತಿ ಕಂಡ ಶಾಂತಜ್ಜ ತುಂಬ ಖುಷಿಯಿಂದ 'ಹೋ ಎಸ್, ಅದಕ್ಕೇನಂತೆ ಆ ಕೆಲಸ ನಾಳೆಯಿಂದಲೇ ಆರಂಭಿಸೋಣ' ಎಂದು ಉತ್ತರಿಸಿದಾಗ ಕಿರಣ್ ಹಾಗೂ ಬಾಲು ಸಂತಸ ಪಟ್ಟರು.

ಮರುದಿನ ಶಾಂತಜ್ಜ ಅವರನ್ನು ಮನೆಯ ಹಿತ್ತಲಿಗೆ ಕರೆದೊಯ್ದು ಅಲ್ಲಿ 2X4 ಅಡಿ ಜಾಗ ತೋರಿಸಿ ಇಂದು ಇಷ್ಟು ಜಾಗವನ್ನು ಚೆನ್ನಾಗಿ ಅಗೆತ ಮಾಡಿ ಮಣ್ಣನ್ನು ಬಿಸಿಲಿಗೆ ಚೆನ್ನಾಗಿ ಒಣಗಲು ಬಿಡಿ ಎಂದರು. ಅದರಂತೆ ಮೊಮ್ಮಕ್ಕಳು ಮುಕ್ಕಾಲು ಗಂಟೆಯೊಳಗೆ ಅದನ್ನು ಮಾಡಿ ಮುಗಿಸಿದರು. ಎರಡನೇ ದಿನ ಶಾಂತಜ್ಜ ಪೇಟೆಗೆ ಹೋಗಿ ಒಳ್ಳೆ ಗುಣಮಟ್ಟದ ಒಂದಿಷ್ಟು ಬೀನ್ಸ್ ಹಾಗೂ ಬದನೆಯ ಬೀಜ ಖರೀದಿಸಿ ತಂದರು. ಆನಂತರ ಪುನಃ ಮೊಮ್ಮಕ್ಕಳನ್ನು ಹಿತ್ತಲಿಗೆ ಕರೆದೊಯ್ದು ಅವರು ಅಗತ ಮಾಡಿದ ಜಾಗವನ್ನು ಸಮವಾಗಿ ಎರಡು ಭಾಗ ಮಾಡಿಸಿದರು.

ಚಿಕ್ಕವನಾದ ಬಾಲು 'ಯಾಕೆ ತಾತಾ' ಎಂದು ಕೇಳಿದಾಗ ಅವರು ಒಂದು ಭಾಗ ಬೀನ್ಸ್ ಮತ್ತೊಂದು ಭಾಗದಲ್ಲಿ ಬದನೆ ಗಿಡ ಬೆಳೆಯಲು ಎಂದು ಉತ್ತರಿಸಿದರು. ಪುನಃ ಶಾಂತಜ್ಜ, ಅವರಿಗೆ ಎರಡೂ ಭಾಗದಲ್ಲಿ ನಾಲ್ಕು ಅಂಗುಲ ಅಂತರದಲ್ಲಿ ಎರಡು ಅಂಗುಲದ ಗುಣಿ ಮಾಡಲು ಹೇಳಿ ಅದಾದ ಬಳಿಕ ಅವರ ಕೈಗೆ ತಾವು ತಂದಿದ್ದ ಬೀಜ ಕೊಟ್ಟು ನಿಧಾನವಾಗಿ ಆ ಗುಳಿಯಲ್ಲಿ ಹಾಕಿ ಅದನ್ನು ತೆಳುವಾದ ಮಣ್ಣಿನಿಂದ ಮುಚ್ಚಿ ಒಂದಿಷ್ಟು ನೀರು ಸಿಂಪಡಿಸಲು ಹೇಳಿದರು. ತಾತಾ ಹೇಳಿದಂತೆ ಮೊಮ್ಮೊಕ್ಕಳು ಚಾಚೂ ತಪ್ಪದೆ ಮಾಡಿ ಮುಗಿಸಿದವು. ಅದಾಗಿ ಎಂಟು ದಿನಗಳ ನಂತರ ಅವರು ಹಾಕಿದ್ದ ಬೀಜಗಳೆಲ್ಲ ಮೊಳಕೆಯೊಡೆದು ಪುಟ್ಟ ಸಸಿಗಳು ನೆಲದಿಂದ ತಲೆ ಎತ್ತಿ ಬಂದಿರುವುದನ್ನು ಗಮನಿಸಿ ಖುಷಿ ಪಟ್ಟು ತಾತನಿಗೆ ತೋರಿಸಿದಾಗ ಅವರೂ ಗುಡ್ ಎಂದು ಹೇಳಿದರು. ಈಗ ಆ ಸಸಿಯ ಬುಡಕ್ಕೆ ಇನ್ನೂ ಸ್ವಲ್ಪ ಮಣ್ಣು ಕೊಟ್ಟು ಅದರ ಮೇಲೆ ಸ್ವಲ್ಪ ಕೊಟ್ಟಿಗೆ ಗೊಬ್ಬರ ಹಾಕಿ. ಪ್ರತಿ ಎರಡು ದಿನಗಳಿಗೊಮ್ಮೆ ನೀರು ಉಣಿಸಲು ಸೂಚಿಸಿದರು. ಕಿರಣ್ ಹಾಗೂ ಬಾಲು ಅದನ್ನು ಆಸಕ್ತಿಯಿಂದ ಮಾಡತೊಡಗಿದರು. ಒಂದು ವಾರದ ನಂತರ ಅವರ ಬಳಿ ಬಂದು ನೋಡಿದಾಗ ಸಸಿಗಳು ಪುಟ್ಟ ಪುಟ್ಟ ಗಿಡವೇನೋ ಆಗಿದ್ದವು ಆದರೆ ಅಷ್ಟೊಂದು ಆರೋಗ್ಯ ಕರವಾಗಿ ಬೆಳೆದಿರಲಿಲ್ಲ. ಈ ವಿಷಯ ತಾತನಿಗೆ ಬಂದು ತಿಳಿಸಿದಾಗ ಅವರು ಮೊಮ್ಮಕ್ಕಳೊಂದಿಗೆ ಅಲ್ಲಿಗೆ ಬಂದು ಅವುಗಳನ್ನು ನೋಡಿ 'ಇದಕ್ಕೆ ಮುಖ್ಯ ಕಾರಣ ಏನೆಂದರೆ ಆ ಗಿಡಗಳ ಸುತ್ತ ಬೇಡದ ಹುಲ್ಲು ಹಾಗೂ ಬೇಡದ ಗಿಡಗಳು ಬೆಳೆದು ಅವು ನೀವು ನೆಟ್ಟ ಗಿಡಗಳನ್ನು ಬೆಳೆಯಲು ಅವಕಾಶ ಮಾಡಿಕೊಡುತ್ತಿಲ್ಲ, ಅವು ಆರೋಗ್ಯಕರವಾಗಿ ಬೆಳೆಯಬೇಕಾದರೆ ಮೊಟ್ಟ ಮೊದಲು ನೀವು ಆ ಗಿಡಗಳ ಸುತ್ತ ಬೆಳೆದು ನಿಂತ ಅನವಶ್ಯಕ ಹುಲ್ಲು ಹಾಗೂ ಇತರೆ ಗಿಡಗಳನ್ನು ಕಿತ್ತು ಹಾಕಿ ಮತ್ತೆ ಸ್ವಲ್ಪ ಕೊಟ್ಟಿಗೆ ಗೊಬ್ಬರ ಹಾಕಿ ಕಾಲ ಕಾಲಕ್ಕೆ ನೀರುಣಿಸುತ್ತಿರಿ' ಎಂದು ಹೇಳಿದರು. ಅದಾದ ಕೆಲವು ದಿನಗಳ ಬಳಿಕ ಆ ಇಬ್ಬರೂ ಮೊಮ್ಮಕ್ಕಳು ಅಲ್ಲಿಗೆ ಬಂದು ನೋಡಿದಾಗ ತಾವು ಹಾಕಿದ್ದ ಗಿಡಗಳು ಆರೋಗ್ಯದಿಂದ ಇದ್ದು ಗಿಡದ ತುಂಬ ಬೀನ್ಸ್ ಹಾಗೂ ಬದನೆ ಬಂದಿರುವುದು ಕಂಡು ಕುಣಿದು ಕುಪ್ಪಳಿಸಿದರು. ಆಗ ಅಲ್ಲಿದ್ದ ಅವರ ತಾತ 'ನೋಡಿದಿರಾ ಇದರಿಂದ ಒಂದು ಪಾಠ ಕಲಿಯಬೇಕು' ಎಂದು ಹೇಳಿದಾಗ ಇಬ್ಬರೂ ಒಕ್ಕೊರಲಿನಿಂದ 'ಏನು ತಾತಾ ಆ ಪಾಠ ಹೇಳಿ' ಎಂದರು. ಅವರು 'ನಾವು ಮನುಷ್ಯರೂ ಆರೋಗ್ಯದಿಂದ ಬೆಳೆದು ಒಳ್ಳೆ ಬುದ್ಧಿ ಶಕ್ತಿ, ಸುವಿಚಾರ ಪಡೆಯ ಬೇಕಾದಲ್ಲಿ ನಮ್ಮ ಮನಸ್ಸೆಂಬ ನೆಲದಲ್ಲಿ ಅನವಶ್ಯಕ ವಿಚಾರ ಆಸೆ ಬೆಳೆಯದಂತೆ ಜಾಗ್ರತೆಯಿಂದ ನೋಡಿಕೊಳ್ಳಬೇಕು' ಎಂದು ವಿವರಿಸಿದರು. ಅದನ್ನು ಆಲಿಸಿದ ಮೊಮ್ಮಕ್ಕಳು 'ಥ್ಯಾಂಕ್ಯೂ ತಾತಾ' ಎಂದು ಸಂತಸ ವ್ಯಕ್ತಪಡಿಸಿದರು. ■

